ಶ್ರೀ ಭೀಮಣ್ಣ ಖಂಡ್ರೆ.— ಹಾಗಿದ್ದರೆ ಎರಡು ವರ್ಷಗಳಲ್ಲಿಯಾದರೂ ಇದನ್ನು ಮುಗಿಸುತ್ತೀರಾ?

ಶ್ರೀ ಎಂ. ಚಂದ್ರಶೇಖರ್.— ಎಲ್ಲ ಕಡೆಗೂ ಕುಡಿಯುವ ನೀರನ್ನು ಒದಗಿಸಬೇಕೆಂಬುದೇ ನಮ್ಮ ಸರ್ಕಾರದ ನೀತಿಯಾಗಿದೆ. ಆದ್ದರಿಂದ ಆದಷ್ಟೂ ಬೇಗ ಇದನ್ನು ಮುಗಿಸಲು ಪ್ರಯತ್ನ ಮಾಡುತ್ತೇವೆ

ವಿಷಯ : ಮಾಲೂರು ತಾಲ್ಲೂಕು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಕಾರ್ಯಕಾರಿ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸುವ ವಿಚಾರ.

ಪ್ರಶ್ನೆ : 28(29) ಶ್ರೀ ಎ. ನಾಗರಾಜು (ಮಾಲೂರು).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ : —

(ಅ) ಮಾಲೂರು ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕಿನ ಕಾರ್ಯಕಾರಿ ಮಂಡಲಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸಿ ಮೂರು ವರ್ಷಗಳ ಅವಧಿ ಮುಗಿದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ;

(ಆ) ರದ್ದಾದ ಕಾರ್ಯಕಾರಿ ಸಮಿತಿಯ ವಿರುದ್ಧ 24 ದೂರುಗಳನ್ನು ಮಾಡಿರುವುದು ನಿಜವೇ;

(ಇ) ಹಾಗಿದ್ದಲ್ಲಿ ಆ ದೂರುಗಳು ಯಾವುವು;

(ಈ) ಈ ದೂರುಗಳ ಬಗ್ಗೆ ಸರಕಾರದವರು ಏನು ಕ್ರಮ ತೆಗೆದುಕೊಂಡಿರುತ್ತಾರೆ?

ಉತ್ತರ : ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).— (ಅ) ಹೌದು. (ಆ) ಹೌದು.

(ಇ) ವಿವರಗಳು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಿದೆ.

(ಈ) ಈ ದೂರುಗಳನ್ನು ಸರಿಪಡಿಸುವ ಉದ್ದೇಶದಿಂದ ಸಹಕಾರ ಸಂಘಗಳ ಕಾಯಿದೆ ಕಲಂ 31ರ ಮೇರೆಗೆ ಈ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಲಾಯಿತು. ಮತ್ತು ದಿನಾಂಕ 21-3-80ರಿಂದ ಸರಕಾರದ ವತಿಯಿಂದ ಆಡಳಿತಾಧಿಕಾರಿಯವರನ್ನು ನೇಮಿಸಲಾಯಿತು.

ಸಂಬಂಧಪಟ್ಟ ವಿವರಗಳ ಅನುಬಂಧ

ದೂರುಗಳ ವಿವರಣೆ ಕೆಳಗಿನಂತೆ ಇದೆ.

1) ಷೇರು ಹಣವನ್ನು ಸಂಬಂಧಪಟ್ಟ ಸಾಲಗಾರರ ಸಾಲದ ಖಾತೆಗೆ ಹೊಂದಾಣಿಕೆ ಅಥವಾ ಹಿಂತಿರುಗಿಸಿರುವುದು.

2) ಬೈಲಾ ಕ್ರಮ ಸಂಖ್ಯೆ 10ನ್ನು ಉಲ್ಲಂಘಿಸಿ 'ಎ' ವರ್ಗದ ಸದಸ್ಯರಿಗೆ ಷೇರು ಹಣವನ್ನು ವಾಪಸ್ಸು ಮಾಡಿರುವುದು

3) ಸದಸ್ಯರನ್ನು ನೇಮಿಸುಕೊಳ್ಳುವಾಗ ನಡೆದಿರುವ ನ್ಯೂನತೆಗಳು.

4) ಕರ್ನಾಟಕ ರಾಜ್ಯ ಸಹಕಾರ ಭೂ ಅಭಿವೃದ್ಧಿ ಬ್ಯಾಂಕಿಗೆ ಗ್ರಾಮಾಂತರ ಡಿಬೆಂಚರ್ ಹಣವನ್ನು ವಾಪಸ್ಸು ಕಟ್ಟದಿರುವುದು ಮತ್ತು ಆ ಹಣವನ್ನು ಬ್ಯಾಂಕಿನ ವ್ಯವಹಾರದಲ್ಲಿ ಉಪಯೋಗಿಸಿಕೊಂಡಿರುವುದರ ಬಗ್ಗೆ.

5) ಸದಸ್ಯರಿಂದ ಬಾಕಿ ನಿಂತಿರುವ ಸಾಲದ ಹಣವನ್ನು ವಸೂಲಾತಿ ಮಾಡುವಲ್ಲಿ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳದಿರುವುದು.

6) ಜೀತ ಪದ್ಧತಿಯಿಂದ ವಿಮುಕ್ತರಾದವರನ್ನು ಸದಸ್ಯರಾಗಿ ತೆಗೆದುಕೊಳ್ಳದಿರುವುದು ಮತ್ತು ಸಾಲ ಮಂಜೂರು ಮಾಡದೇ ಇರುವುದು. 751 ಜನ ಹರಿಜನ ಸದಸ್ಯರ ಪೈಕಿ ಕೇವಲ 137 ಜನ ಸದಸ್ಯರಿಗೆ ಮಾತ್ರ ಸಾಲ ಮಂಜೂರು ಮಾಡಿರುವುದು.

7) ಬಾಕಿ ನಿಂತಿರುವ ಹಣ ರೂ. 39019-54 ಸಸ್ಪೆನ್ಸ್ ಅಸೆಟ್ಸ್ (ಅಮಾನತ್ತು ಆಸ್ತಿ) ಯನ್ನು ವಸೂಲಿ ಮಾಡದಿರುವುದು.

8) ಸಾಲಾ ಖೈರು 30-6-76ಕ್ಕೆ ರೂ. 155212-58 ನಿವ್ವಳ ನಷ್ಟವಾಗಿರುವುದು.

9) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 59ರ ಕಲಂ 27ರಲ್ಲಿ ನಿಗದಿಪಡಿಸಿರುವ ಕಾಲಾವಧಿಯಲ್ಲಿ ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ನಡೆಸದೆ ಇರುವುದು.

10) ಇಲಾಖೆಯ ಅನುಮತಿ ಪಡೆಯದೆ 74-75 ಮತ್ತು 75-76ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ವಿಳಂಬವಾಗಿ ನಡೆಸಿರುವುದು.

11) ಬೈಲಾ ನಂ. 28ನ್ನು ಉಲ್ಲಂಘಿಸಿ ಆಡಳಿತ ಮಂಡಳಿಯ ಸದಸ್ಯರು ಹೆಚ್ಚುವರಿ ಸಿಟ್ಟಿಂಗ್ ಫೀ ರೂ 5-00 ರಂತೆ ತೆಗೆದುಕೊಂಡಿರುವುದು.

12) ದ್ರಾಕ್ಷಿ ಸಾಲ ಮಂಜೂರಾತಿ ಯೋಜನೆಯಲ್ಲಿ ಇದು ಪ್ರಕರಣಗಳಲ್ಲಿ ದುರ್ವಿನಿಯೋಗವಾಗಿರುವುದು ಮತ್ತು ಅವುಗಳನ್ನು ವಾಪಸ್ಸು ಪಡೆಯದೇ ಇರುವುದು.

13) ಬೈಲಾ ನಂ. 73ನ್ನು ಉಲ್ಲಂಘಿಸಿ ಬ್ಯಾಂಕಿನ ಅಧ್ಯಕ್ಷರು ರೂ. 1500-00 ಗಳನ್ನು ಪ್ರವಾಸ ಭತ್ಯೆ ಮುಂಗಡವಾಗಿ ಸ್ವೀಕರಿಸಿರುವುದು.

14) ಕೋರ್ಟಿನ ಹಾಜರಿ ಪ್ರಮಾಣ ಪತ್ರ ಇಲ್ಲದೆ ಬ್ಯಾಂಕಿನ ಮೂರು ಮಂದಿ ಡೈರೆಕ್ಟರುಗಳು ರೂ. 3287-00ನ್ನು ಪ್ರಯಾಣ ಭತ್ಯ ಮತ್ತು ತುಟ್ಟಿ ಭತ್ಯದ ರೂಪದಲ್ಲಿ ಕೊಟ್ಟಿರುವುದು.

15) ಬೈಲಾ ಕ್ರಮ ಸಂಖ್ಯೆ 4ರಲ್ಲಿ ನಿಗದಿಪಡಿಸಿರುವಂತೆ ಕೋ ಎಕ್ಸಿಕ್ಯೂಟರ್ಸ್‌ಗಳನ್ನು 'ಬಿ' ವರ್ಗದ ಸದಸ್ಯರನ್ನಾಗಿ ಸೇರಿಸಿಕೊಳ್ಳದೇ ಇರುವುದು ಮತ್ತು ಸುಸ್ತಿದಾರರಿಗೆ ಸಾಲ ಮಂಜೂರು ಮಾಡಿರುವುದು.

16) ನೀರಾವರಿ ಪಂಪುಸೆಟ್‌ಗಳನ್ನು (ಐಪಿ ಸೆಟ್) ಸಾಲಗಳ ಮಂಜೂರಾತಿ ಮತ್ತು ವಿತರಣೆಯಲ್ಲಿ ಅಕ್ರಮ ವ್ಯವಹಾರ ನಡೆದಿರುವುದು.

17) ಬ್ಯಾಂಕಿನಲ್ಲಿ ವಿವಿಧ ಯೋಜನೆಗಳಲ್ಲಿ 179 ಸಾಲದ ಆರ್ಜಿಗಳನ್ನು ಬಾಕಿ ಇಟ್ಟುಕೊಂಡಿರುವುದು ಮತ್ತು 536 ಡಿವಿ ಕಡತಗಳನ್ನು ಕರ್ನಾಟಕ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿಗೆ ತಲುಪಿಸದೇ ಇರುವುದು.

18) ಬ್ಯಾಂಕಿನ ಸಿಬ್ಬಂದಿ ಸಂಖ್ಯಾಬಲ ಮತ್ತು ವೇತನ ಶ್ರೇಣಿಯನ್ನು ನಿಗದಿಪಡಿಸಿ ಅದಕ್ಕೆ ಮಂಜೂರಾತಿ ಪಡೆಯದೇ ಇರುವುದು.

19) ಮಂಜೂರಾದ ಸಾಲಗಳನ್ನು ಉದ್ದೇಶಗಳಿಗೆ ಸಂಬಂಧಿಸಿದಂತೆ ಉಪಯೋಗ ಮಾಡಿರುತ್ತಾರೆಯೇ ಎಂಬುದನ್ನು ಪರಿಶೀಲಿಸದೇ ಇರುವುದು.

20) ಶ್ರೀ ವೆಂಕಟಸ್ವಾಮಿಯವರು ಮಂಜೂರಾದ ಬಾವಿ ಸಾಲದ ಮೊತ್ತ ರೂ. 9500ಗಳನ್ನು ದುರುಪಯೋಗ ಮಾಡಿಕೊಂಡಿರುವುದು ಮತ್ತು ಆಡಳಿತ ಮಂಡಳಿಯವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇರುವುದು

21) ಅನೇಕ ಪ್ರಕರಣಗಳಲ್ಲಿ ಅಮಲ್ಜಾರಿ ಹೂಡಲು ಕ್ರಮ ತೆಗೆದುಕೊಳ್ಳಲು ವಿಫಲವಾಗಿರುವುದು.

22) ಅನೇಕ ಪ್ರಕರಣಗಳಲ್ಲಿ ಸುಸ್ತಿದಾರರ ಮೇಲೆ ದಾವಾ ಹೂಡದೇ ಇರುವುದು.

23) ಬಾವಿ ಸಾಲ ಪಡೆದ 497 ಅಪೂರ್ಣವಾಗಿದ್ದ ಪ್ರಕರಣಗಳಲ್ಲಿ ಮನ ಒಲಿಸಿ ಪೂರ್ಣ ಮಾಡಲು ವಿಫಲರಾಗಿರುವುದು.

24) ಅನಧಿಕೃತ ಮತ್ತು ಬ್ಯಾಂಕಿಗೆ ಸಂಬಂಧವಿಲ್ಲದ ದೂರವಾಣಿ ಕರೆಗಳಿಗೆ (ಟ್ರಂಕ್ ಕಾಲ್) ಅವಕಾಶ ಮಾಡಿದ್ದು ಮತ್ತು ಅವುಗಳ ವೆಚ್ಚವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡದೇ ಇರುವುದು.

ಶ್ರೀ ಎಂ. ನಾಗರಾಜು.—ಈ ಭೂ ಅಭಿವೃದ್ಧಿ ಬ್ಯಾಂಕ್‌ನ ಆಡಳಿತ ಮಂಡಲಿ ಅವಧಿಯಲ್ಲಿ ಬಹಳ ಜನರಿಗೆ ಲೋನ್ ಮಂಜೂರು ಮಾಡಿದರು. ಹೀಗೆ ಸಾಲ ಮಂಜೂರು ಮಾಡಿದಂಥ ಸದಸ್ಯರುಗಳ ಪೈಕಿ ಈಗ ಬಹಳಷ್ಟು ಜನ ಸದಸ್ಯರನ್ನು ಐಡೆಂಟಿಫೈ ಮಾಡುವುದಕ್ಕಾಗುತ್ತಿಲ್ಲ. ಇಂತಹವರಿಗೆ ಕೊಟ್ಟಿರುವ ಹಣವೆಷ್ಟು? ಇಂತಹವರಿಗೆ ಸಾಲ ಮಂಜೂರಾಗಿ ಕೊಟ್ಟಂತಹ ಕೆಲವು ಚೆಕ್‌ಗಳು ಮಾಜಿ ಅಧ್ಯಕ್ಷರ ಅಕೌಂಟ್‌ನಲ್ಲಿ ಕ್ಯಾಷ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿಯೇ? ಬಂದಿದ್ದರೆ ಕಾನೂನು ಪ್ರಕಾರ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಆರ್.ಎಲ್. ಜಾಲಪ್ಪ — ಬೇನಾಮಿ ಲೋನ್ ತೆಗೆದುಕೊಂಡು ಅದನ್ನು ಅಲ್ಲಿನ ಅಧ್ಯಕ್ಷರು ದುರುಪಯೋಗ ಮಾಡಿಕೊಂಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ಕಾರ್ಯಕಾರಿ ಸಮಿತಿ ಮೇಲೆ 24 ದೂರುಗಳು ಬಂದಮೇಲೆ ಆಡಳಿತ ಮಂಡಲಿಯನ್ನು ರದ್ದು ಮಾಡಲಾಯಿತು. ಈಗ 20 ದೂರುಗಳನ್ನು ಸರಿಪಡಿಸಲಾಗಿದೆ. ಇನ್ನು ನಾಲ್ಕು ದೂರುಗಳನ್ನು ಸರಿಪಡಿಸಬೇಕಾಗಿದೆ. ಈ ಬಗ್ಗೆ ನಾವು ಈಗಾಗಲೇ ಅಪ್ಪಣೆ ಮಾಡಿದ್ದೇವೆ. ಮತ್ತು ಈ ವರ್ಷ ಚುನಾವಣೆ ನಡೆಸಲು ಏರ್ಪಾಡು ಮಾಡಿದೆವೆ. ಇಲ್ಲಿನ ಅಧ್ಯಕ್ಷರು ಬೇನಾಮಿ ಲೋನ್ ತೆಗೆದುಕೊಂಡು ದುರುಪಯೋಗ ಪಡಿಸಿಕೊಂಡ ಪ್ರಕರಣ ಯಾವುದಾದರೂ ಇದ್ದರೆ, ಅದನ್ನು ಮಾನ್ಯ ಸದಸ್ಯರು ಸರ್ಕಾರಕ್ಕೆ ತಿಳಿಸಿದರೆ, ನಾವು ಅವರ ಮೇಲೆ ಕ್ರಮ ಕೈಕೊಳ್ಳುತ್ತೇವೆ.

ಅಭಾವ ಪರಿಸ್ಥಿತಿಯಿಂದಾಗಿ ರಾಜ್ಯದಲ್ಲಿನ ಪರಿಹಾರಕ್ರಮಗಳು

ಪ್ರಶ್ನೆ. 29(36) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಕಂದಾಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ಕಳೆದ ವರ್ಷ ಮಳೆ ಇಲ್ಲದೆ ಅಭಾವಕ್ಕೊಳಗಾದ ಜಿಲ್ಲೆಗಳಾವುವು;

ಆ) ಪ್ರತಿ ಜಿಲ್ಲೆಯಲ್ಲಿಯೂ ಅಭಾವ ಪರಿಹಾರಕ್ಕಾಗಿ ಜನರಿಗೆ ಕುಡಿಯುವ ನೀರು, ಕೂಲಿಯನ್ನು ಒದಗಿಸಲು ದನಕರುಗಳಿಗೆ ನೀರು ಹಾಗೂ ಮೇವನ್ನು ಒದಗಿಸಲು ಸರಕಾರದವರು ಕೈಕೊಂಡ ಕ್ರಮಗಳೇನು ಹಾಗೂ ಖರ್ಚು ಮಾಡಿದ ಮೊತ್ತವೆಷ್ಟು;

ಇ) ಅಭಾವ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರದವರು ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಒದಗಿಸದೆ ಇದ್ದುದರಿಂದ ಜನ ಹಾಗೂ ಜಾನುವಾರುಗಳಿಗೆ ತೊಂದರೆಯಾಗಿರುವುದು ಸರ್ಕಾರದ